# ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ: 91-080-22212408
ಫ್ಯಾಕ್ಸ್ : 91-080-2277528

---

ದಿನಾಂಕ: 20-03-2009

ಸಂಖ್ಯೆ: ತಾಂ.ಆಡಳಿತ ಸು.12/2008-09

## ಸುತ್ತೋಲೆ

ವಿಷಯ: ಮೋಜಿಣಿ ಮತ್ತು ಸಂಯೋಜಿತ ಮ್ಯುಟೇಷನ್ ಪೋಡಿ ಕಾರ್ಯವ್ಯವಸ್ಥೆಗೆ ಭೂಮಾಪಕರನ್ನು ಹೆಚ್ಚುವರಿಯಾಗಿ ಕಾರ್ಯ ಹಂಚಿಕೆ ಮಾಡುವ ಬಗ್ಗೆ.

★★★

ಭೂದಾಖಲೆಗಳ ನಿರ್ವಹಣೆಯ ಹಂತದಲ್ಲಿ ಭೂಮಾಪನ ಮಾಡಿ ಸಿದ್ಧಪಡಿಸಿದ ದಾಖಲೆಗಳು ಮತ್ತು ಅದರ ಆಧಾರವಾಗಿ ತಯಾರಾದ ಹಕ್ಕು ದಾಖಲೆಗಳು ಪ್ರಮುಖ ಪಾತ್ರ ವಹಿಸುವುದಲ್ಲದೇ, ಇವುಗಳಲ್ಲಿನ ಮಾಹಿತಿಗಳು ತಾಳೆಯಾಗುವುದಲ್ಲದೇ ಪೂರಕವೂ ಆಗಿರಬೇಕಾಗುತ್ತದೆ. ಇವುಗಳಲ್ಲಿ ಮಾಹಿತಿಗಳು ಹೊಂದಾಣಿಕೆ ಆಗದೇ ಇದ್ದಲ್ಲಿ ಅಂತಹ ಜಮೀನಿಗೆ ಸಂಬಂಧಿಸಿದಂತೆ ನಿರ್ವಹಿಸಬೇಕಾದ ಯಾವುದೇ ಕಾರ್ಯಗಳು ಗೊಂದಲಕ್ಕೆ ಒಳಪಡುತ್ತದೆ. ಈ ಗೊಂದಲಗಳು ಉಂಟಾಗದೆ ಇರಲು ಹಕ್ಕು ದಾಖಲೆಗಳು ಮತ್ತು ಪೋಡಿ ಪ್ರಕ್ರಿಯೆ ಮೂಲಕ ಗಡಿ ನಿರ್ಧರಿಸುವ ಕಾರ್ಯ ಮತ್ತು ನಕ್ಷೆ ಅಂತಿಮಗೊಳಿಸುವ ಪ್ರಕ್ರಿಯೆಗಳು ಏಕಕಾಲದಲ್ಲಿಯೇ ಘಟಿಸಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ರಾಜ್ಯವು ಸಂಯೋಜಿತ ಮ್ಯುಟೇಷನ್ ಪೋಡಿ ತಂತ್ರಾಂಶ ಅಳವಡಿಸುವ ಮೂಲಕ ಈಗಾಗಲೇ ಯಶಸ್ವಿಯಾಗಿ ಜಾರಿಗೊಳಿಸಿದೆ. ಈ ಕಾರ್ಯವು ಜಾರಿಯಾದ ನಂತರ ಸಿದ್ಧಪಡಿಸಲಾದ ಭೂದಾಖಲೆಗಳಲ್ಲಿ ಗೊಂದಲ ಉದ್ಭವಿಸಲು ಸಾಧ್ಯವಿರುವುದಿಲ್ಲ.

ಸಂಯೋಜಿತ ಮ್ಯುಟೇಷನ್ ಪೋಡಿ ತಂತ್ರಾಂಶ ಜಾರಿಯಲ್ಲಿರುವ ತಾಲ್ಲೂಕುಗಳಲ್ಲಿ ಪರ್ಯಾವೇಕ್ಷಕರು ತಮ್ಮ ಹೆಚ್ಚಿನ ಸಮಯವನ್ನು ಗಣಕ ಯಂತ್ರದ ಕಾರ್ಯಗಳಿಗೆ ಮೀಸಲಿಡಬೇಕಾಗುತ್ತದೆ. ಸಂಯೋಜಿತ ಮ್ಯುಟೇಷನ್ ಪೋಡಿ ಜಾರಿಯಲ್ಲಿರುವ ತಾಲ್ಲೂಕುಗಳಲ್ಲಿ ಪರ್ಯಾವೇಕ್ಷಕರು ಅಗತ್ಯ ಸಮಯ ವಿನಿಯೋಗಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ, ಈ ಶಾಖೆಯಲ್ಲಿ ಕಡತಗಳು ಬಾಕಿ ಉಳಿಯಲು ಕಾರಣವಾಗಿರುತ್ತದೆ. ಇದರಿಂದಾಗಿ ಭೂಮಿ ಕಾರ್ಯಗಳಲ್ಲಿ ಹಿನ್ನಡೆಯಾಗುತ್ತಿದೆ. ಇವರ ಕಾರ್ಯ ಒತ್ತಡವನ್ನು ಗಮನಿಸಿ ಈ ಸಂಯೋಜಿತ ಮ್ಯುಟೇಷನ್ ಪೋಡಿಗೆ ಸಂಬಂಧಿಸಿದ ಕೆಲಸಗಳನ್ನು ಸುಗಮಗೊಳಿಸಲು ಒಬ್ಬ ಭೂಮಾಪಕರನ್ನು ಪರ್ಯಾವೇಕ್ಷಕರಿಗೆ ಸಹಕರಿಸಲು ಒದಗಿಸುವುದು ಅಗತ್ಯವಾಗಿರುತ್ತದೆ. ಈಗಾಗಲೇ ಜಾರಿಗೊಳಿಸಿರುವ ಕಾರ್ಯ ಹಂಚಿಕೆ ಸುತ್ತೋಲೆಯಂತೆ ತತ್ಕಾಲ್ ಮತ್ತು ಮ್ಯುಟೇಷನ್ ಪೂರ್ವ ನಕ್ಷೆಗಳ ಕಾರ್ಯ ನಿರ್ವಹಿಸಲು ಇಬ್ಬರು ಭೂಮಾಪಕರನ್ನು ನಿಯೋಜಿಸಲಾಗಿದೆ. ಈ ಇಬ್ಬರೂ ಭೂಮಾಪಕರು ಒಟ್ಟಿಗೆ ಸೇರಿ ಈ ಎರಡೂ ವಿಭಾಗದ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಅವಶ್ಯವಿದ್ದಲ್ಲಿ ಹೋಬಳಿವಾರು ವಿಂಗಡಣೆ ಮಾಡಿ ಎರಡೂ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದೆ. ಇವರೊಂದಿಗೆ ಮೋಜಿಣಿ ತಂತ್ರಾಂಶ ಜಾರಿಯಲ್ಲಿರುವ ತಾಲ್ಲೂಕುಗಳಲ್ಲಿ ಸಂಯೋಜಿತ ಮ್ಯುಟೇಷನ್ ಪೋಡಿ ಕಾರ್ಯಗಳನ್ನು ಇನ್ನು ಮುಂದೆ ಪ್ರತ್ಯೇಕ ಅರ್ಹವಾದ ಭೂಮಾಪಕರು ಪರ್ಯಾವೇಕ್ಷಕರಿಗೆ ಸಹಕರಿಸುವ

sslr-8/tech-2
s

ಕಾರ್ಯ ನಿರ್ವಹಿಸುತ್ತಾರೆ. ಆದಕಾರಣ ಈ ಹೆಚ್ಚುವರಿ ಭೂಮಾಪಕರನ್ನು ಪರ್ಯಾವೇಕ್ಷಕರಿಗೆ ಕಾರ್ಯದಲ್ಲಿ ಸಹಕರಿಸಲು ಕಾರ್ಯ ಹಂಚಿಕೆ ಮಾಡಲು ಸೂಚಿಸಿದೆ. ತಾಲ್ಲೂಕಿ. ಕಾರ್ಯನಿರ್ವಹಿಸುತ್ತಿರುವ ಭೂಮಾಪಕರ ಪೈಕಿ, ಇಂತಹ ಕೆಲಸಕ್ಕೆ ಸಹಕರಿಸಲು ಸೂಕ್ತವಾದ ಒಬ್ಬರನ್ನು ಆಯ್ಕೆ ಮಾಡಿ ಪರ್ಯಾವೇಕ್ಷಕರಿಗೆ ಭೂಮಿ ಮತ್ತು ಮೋಜಣಿ ತಂತ್ರಾಂಶಗಳ ಅನುಷ್ಠಾನದ ಸಮಯದಲ್ಲಿ ತ್ವರಿತವಾಗಿ ಕೆಲಸ ಪೂರ್ಣಗೊಳಿಸಲು ಸಹಕರಿಸಲು ನಿಯೋಜಿಸುವಂತೆ ಆದೇಶಿಸಿದೆ. ಈ ಕಾರ್ಯವನ್ನು ತಹಶೀಲ್ದಾರ್ ರವರು ಮತ್ತು ಭೂದಾಖಲೆಗಳ ಉಪ ನಿರ್ದೇಶಕರುಗಳು ಸಮಾಲೋಚಿಸಿ, ತಕ್ಷಣದಿಂದಲೇ ಜಾರಿಗೊಳಿಸುವುದು. ಹೆಚ್ಚುವರಿಯಾಗಿ ಸಂಯೋಜಿತ ಮ್ಯುಟೇಷನ್ ಪೋಡಿ ಕಾರ್ಯಕ್ಕಾಗಿ ನಿಯೋಜಿಸುತ್ತಿರುವ ಭೂಮಾಪಕರು ಪರ್ಯಾವೇಕ್ಷಕರಿಗೆ ಈ ಕೆಳಕಂಡ ಕೆಲಸಗಳಲ್ಲಿ ಸಹಕಾರ ನೀಡಲು ಸೂಚಿಸಿದೆ.

<u>೧. ಅರ್ಜಿ ಕಿಯೋಸ್ಕ್‌ನಲ್ಲಿ ( **Kiosk**):-</u>

ಹಕ್ಕು ಬದಲಾವಣೆಗೆ ಬಂದಿರುವ ಅರ್ಜಿ ಜೊತೆಯಲ್ಲಿ ಲಗತ್ತಿಸಿರುವ ೧೧ಇ ನಕ್ಷೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ತಂತ್ರಾಂಶದಲ್ಲಿ ಕೇಳುವ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಲು ಪರ್ಯಾವೇಕ್ಷಕರಿಗೆ ಸಹಕರಿಸುವುದು.

<u>೨. ' ಭೂಮಿ 'ಯಲ್ಲಿ</u>

ಎ) ಪರ್ಯಾವೇಕ್ಷಕರ ಲಾಗಿನ್ ನಲ್ಲಿ ಬ್ಲಾಕ್ ಗಳಿಗೆ / ಹಿಸ್ಸಾ ನಂಬರ್‌ಗಳನ್ನು ದಾಖಲಿಸುವ ಕಾರ್ಯದಲ್ಲಿ ಪರ್ಯಾವೇಕ್ಷಕರುಗಳಿಗೆ ಸಹಕಾರ ನೀಡುವುದು.

ಬಿ) ದುರಸ್ತಿಗೆ ಸಂಬಂಧಿಸಿದ ಆಕಾರಬಂದ್, ಅಟ್ಲಾಸ್, ಫಾರಂ ನಂ.೧೦ ನ್ನು ತಯಾರಿಸುವುದು.

೩. ' ಭೂಮಿ ' ಯಲ್ಲಿ ಹಕ್ಕುದಾಖಲೆಯನ್ನು (MR) ಶಿರಸ್ತೇದಾರರು ಅಂತಿಮ ಅನುಮೋದನೆ ನೀಡಿ, ಪರ್ಯಾವೇಕ್ಷಕರ ಲಾಗಿನ್ ದಾಖಲಿಸಿದ ಹಿಸ್ಸಾ ಸರ್ವೆ ನಂಬರುಗಳಂತೆ ಪಹಣಿ ತಯಾರಾದಲ್ಲಿ ದುರಸ್ತಿ ದಾಖಲೆಗಳಾದ ಟಿಪ್ಪಣಿ, ಪಕ್ಕಾ, ಆಕಾರಬಂದ್, ಅಟ್ಲಾಸ್, ಫಾರಂ ನಂ.೧೦ ನ್ನು ತಹಶೀಲ್ದಾರ್ ರವರಿಂದ ದೃಢೀಕರಿಸುವುದು.

ಈ ಸುತ್ತೋಲೆಯ ಅನುಷ್ಠಾನದ ನಂತರ ಪ್ರತಿ ತಾಲ್ಲೂಕಿನಲ್ಲಿಯೂ ಮ್ಯುಟೇಷನ್ ಪೂರ್ವ ನಕ್ಷೆ ಕಾರ್ಯ, ತತ್ಕಾಲ್ ಪೋಡಿ ಕಾರ್ಯ, ದಾಖಲೆ ಕೊಠಡಿ ನಿರ್ವಹಣೆ ಕಾರ್ಯಗಳ ಜೊತೆಗೆ ಸಂಯೋಜಿತ ಮ್ಯುಟೇಷನ್ ಪೋಡಿ ಕಾರ್ಯ ನಿರ್ವಹಣೆಗೂ ಪ್ರತ್ಯೇಕ ಭೂಮಾಪಕರನ್ನು ನಿಯೋಜಿಸಿದಂತಾಗುತ್ತದೆ. ಈ ಸುತ್ತೋಲೆಯನ್ನು ಕೂಡಲೇ ಅನುಷ್ಠಾನಗೊಳಿಸಿ ಕೇಂದ್ರ ಕಛೇರಿಗೆ ಒಂದು ವಾರದೊಳಗಾಗಿ ವರದಿ ಸಲ್ಲಿಸುವುದು.

2/4/09

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು:</u>

೧) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
೨) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
೩) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
೪) ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
೫) ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು / ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ.
೬) ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
೭) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
೮) ಕೇಂದ್ರ ಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
೯) ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು

sslr-8/tech-2
S